ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯವನ್ನು ಸ್ಥಳಾಂತರಿಸುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ : ಸನ್ಮಾನ್ಯ ಸಭಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನ ಮಂಗಳೂರಿನಲ್ಲಿ ಒಂದು ಸರ್ಕಾರದ ಮುದ್ರಣಾಲಯವಿತ್ತು, ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಹಂತಹಂತವಾಗಿ ಅಧಿಕಾರಿಗೆ ನಿಷ್ಕ್ರಿಯೆಯಿಂದಾಗಿ ಮುಚ್ಚುವ ಸ್ಥಿತಿಗೆ ಬಂತು. ಮಂಗಳೂರು ನಗರ ಬೆಳೆಯುತ್ತಿರತಕ್ಕಂಥ ಒಂದು ದೊಡ್ಡ ನಗರ. ಅದರಿಂದ ಈ ಸ್ಥಳೀಯ ನೌಕರರಿಗೂ ಕೂಡ ಅನುಕೂಲವಾಗುತ್ತಿತ್ತು, ಈ ಮುದ್ರಣಾಲಯ ನಮ್ಮ ಜಿಲ್ಲೆಯಲ್ಲಿದ್ದರೆ ಖಂಡಿತಾ ಒಂದು ಗೌರವವಿರುತ್ತದೆ ಎಂಬುದು ನನ್ನ ಅಭಿಪ್ರಾಯ, ಬಹುಶಃ ತಾತ್ಕಾಲಿಕವಾಗಿ ನೌಕರಿ ಮಾಡುವವರಿಗೂ ಕೂಡ ಅನುಕೂಲವಾಗುತ್ತಿತ್ತು, ಇದನ್ನು ಸ್ಥಳಾಂತರ ಮಾಡಿದ್ದಾರೆ. ಅದಕ್ಕೆ ಬೇಕಾದ ಕಟ್ಟಡ ಇನ್ನಿತರ ಎಲ್ಲಾ ವ್ಯವಸ್ಥೆಗಳಿದ್ದು ಅದನ್ನು ಅಲ್ಲಿಯೆ ಮುಂದುವರಿಸುವುದನ್ನು ಮಾಡಬೇಕೆಂದು ನಾನು ಈ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಸರವಾಜ ಬೊಮ್ಮಾಯಿ : ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಇ) ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಓಂಕಾರ ವಲಯದ ಭೋಳೇ ಗೌಡನಕಟ್ಟೆ ಟೈಗರ್ ಪ್ರಿಸರ್ವ್ ಪ್ರದೇಶದಲ್ಲಿ ಗಣಿಕಾರಿಕೆಗೆ ಅನುಮತಿ ನೀಡಲು ಸರ್ಕಾರ ತೀರ್ಮಾನಿಸಿರುವ ಕುರಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ 6 ರಕ್ಷಿತ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇವೆಂದು ಒಂದು ಪ್ರಕಟಣೆ, ತೀರ್ಮಾನ ಹೊರಬಿದ್ದ ಮೇಲೆ ನಮ್ಮ ಭಾಗದಲ್ಲಿ ಬೋಳೇಗೌಡನಕಟ್ಟೆ ಎಂದು ಬಂಡೀಪುರ ಹುಲಿ ಯೋಜನೆಗೆ ಸೇರಿದ ಪ್ರದೇಶವಾಗಿದೆ. ಈ 6 ರಲ್ಲಿ ಅದು ಕೂಡ ಸೇರಿದೆ ಎಂದು ವಿಷಯ ಗೊತ್ತಾದ ಮೇಲೆ ಆ ಭಾಗದಲ್ಲಿರುವ ಸುಮಾರು 20–30 ಗ್ರಾಮಸ್ಥರೆಲ್ಲಾ ಬಹಳ ಆತಂಕಕ್ಕೆ ಒಳಗಾಗಿ, ಈಗೇನಾದರೂ ಗಣಿಗಾರಿಕೆ ಬಂದರೆ, ಈಗಾಗಲೆ ಕಾಡಿನಲ್ಲಿರುವ ಆನೆಗಳೆಲ್ಲಾ ಬಂದು ಬೆಳೆಯನ್ನೆಲ್ಲಾ ಹಾನಿಯಾಗಿ ಅವರ